# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 570 |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23-12-2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ರೈತ ಕೇಂದ್ರಗಳು ಸ್ಥಾಪನೆ ಆಗಿರುವ ಒಟ್ಟು ಸಂಖ್ಯೆ ಎಷ್ಟು; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಕೇಂದ್ರಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ಒದಗಿಸುವುದು)</td><td>
ಸರ್ಕಾರಿ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99 ದಿ:29.06.2000ರಲ್ಲಿ ರಾಜ್ಯದಲ್ಲಿ 747 ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿರುತ್ತದೆ. ಮುಂದುವರೆದು ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ಎರಡನ್ನು ಮರು ಹೊಂದಾಣಿಕೆ ಮಾಡಿ ಹೊರಡಿಸಿದ ಸರ್ಕಾರಿ ಆದೇಶ ಸಂಖ್ಯೆ:ಕೃಇ 166 ಕೃಪಸೇ 2011 ದಿನಾಂಕ:08-07-2014 ರ ಪ್ರಕಾರ 7 ರೈತ ಸಂಪರ್ಕ ಕೇಂದ್ರಗಳನ್ನು ರದ್ದುಗೊಳಿಸಿ 740 ರೈತ ಸಂಪರ್ಕ ಕೇಂದ್ರಗಳನ್ನು ಉಳಿಸಿಕೊಳ್ಳಲಾಗಿರುತ್ತದೆ. ರದ್ದುಗೊಳಿಸಿದ 7 ರೈತ ಸಂಪರ್ಕ ಕೇಂದ್ರಗಳನ್ನು ಈ ಕೆಳಕಂಡ ರೈತ ಸಂಪರ್ಕ ಕೇಂದ್ರಗಳಡಿ ವಿಲೀನಗೊಳಿಸಲಾಗಿದೆ.
<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ರದ್ದುಗೊಳ್ಳುವ ರೈ.ಸಂ.ಕೇ ಹೆಸರು</th><th>ವಿಲೀನಗೊಂಡ ರೈ.ಸಂ.ಕೇ ಹೆಸರು</th></tr>
<tr><td>1</td><td>ಬೆಂಗಳೂರು ಉತ್ತರ</td><td>ಯಶವಂತಪುರ</td><td>ಮಾದನಾಯಕನಹಳ್ಳಿ</td></tr>
<tr><td>2</td><td>ಬೆಂಗಳೂರು ಉತ್ತರ</td><td>ಯಲಹಂಕ</td><td>ಚಿಕ್ಕಜಾಲ</td></tr>
<tr><td>3</td><td>ಬೆಂಗಳೂರು ಉತ್ತರ</td><td>ಹೆಬ್ಬಾಳ</td><td>ಚಿಕ್ಕಜಾಲ</td></tr>
<tr><td>4</td><td>ಬೆಂಗಳೂರು ಪೂರ್ವ</td><td>ಕೆ. ಆರ್. ಪುರಂ</td><td>ಬಿದರಹಳ್ಳಿ</td></tr>
<tr><td>5</td><td>ಬೆಂಗಳೂರು ಪೂರ್ವ</td><td>ವರ್ತೂರು</td><td>ಬಿದರಹಳ್ಳಿ</td></tr>
<tr><td>6</td><td>ಬೆಂಗಳೂರು ದಕ್ಷಿಣ</td><td>ಬೇಗೂರು</td><td>ಕಗ್ಗಲೀಪುರ</td></tr>
<tr><td>7</td><td>ಶಿವಮೊಗ್ಗ</td><td>ಶಿವಮೊಗ್ಗ- ಕಸಬಾ(2)</td><td>ಶಿವಮೊಗ್ಗ- ಕಸಬಾ(1)</td></tr>
</table>
ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಕೃಇ 141 ಕೃಪಸೇ 2015, ದಿನಾಂಕ:27.09.2016 ರಲ್ಲಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ನೂತನವಾಗಿ ಪ್ರಾರಂಭಿಸಲಾಗಿರುವ ನಿಡಗುಂದಿ ಮತ್ತು ಮನಗೂಳಿ ಹೋಬಳಿಗಳಲ್ಲಿ ನೂತನವಾಗಿ ಎರಡು ರೈತ ಸಂಪರ್ಕ ಕೇಂದ್ರಗಳನ್ನು ಪ್ರಾರಂಭಿಸಲಾಗಿರುತ್ತದೆ.
ಪ್ರಸ್ತುತ ರಾಜ್ಯದಲ್ಲಿ ಒಟ್ಟು 742 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ (ಅನುಬಂಧ 1 ರಲ್ಲಿ ಜಿಲ್ಲಾವಾರು ವಿವರಗಳನ್ನು ಒದಗಿಸಲಾಗಿದೆ).
</td></tr>
</table>

| | | |
|---|---|---|
| ಆ) | ರೈತ ಕೇಂದ್ರದಿಂದ ರೈತರಿಗೆ ನೀಡಲಾಗುವ ಸವಲತ್ತುಗಳೇನು: (ಮಾಹಿತಿ ಒದಗಿಸುವುದು) | ಕೃಷಿ ಇಲಾಖೆಯಲ್ಲಿ ದೊರೆಯುವ ಸೌಲಭ್ಯ/ಸೇವೆಗಳ ಬಗ್ಗೆ ಮಾಹಿತಿ ನೀಡಲು ಹೋಬಳಿ ಮಟ್ಟದಲ್ಲಿ ಕೃಷಿ ಅಧಿಕಾರಿಗಳು, ಸಹಾಯಕ ಕೃಷಿ ಅಧಿಕಾರಿ ಮತ್ತು ಆತ್ಮ ಸಿಬಂದಿ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಜರಿದ್ದು, ರೈತರಿಗೆ ಮಾಹಿತಿ ನೀಡುತ್ತಿದ್ದಾರೆ. ರೈತರ ತರಬೇತಿ, ಗ್ರಾಮ ಸಭೆ ಇತರೆ ಕಾರ್ಯಕ್ರಮಗಳಲ್ಲಿ ಇಲಾಖೆಯಲ್ಲಿ ಲಭ್ಯವಿರುವ ಯೋಜನೆಗಳ ಬಗ್ಗೆ ತಿಳಿಸಲಾಗುತ್ತದೆ ಹಾಗೂ ಸೌಲಭ್ಯಗಳನ್ನು ನಿಯಮಿತವಾಗಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.<br><br>1. ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕಾರ್ಯಕ್ರಮಗಳು ಮಾರುಕಟ್ಟೆ ಮಾಹಿತಿ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಆಧುನಿಕ ಮಾಹಿತಿ ನೀಡುವುದು.<br>2. ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮುಂತಾದವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡುವುದು.<br>3. ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ, ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸುವುದು.<br>4. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ ಮತ್ತು ಇತರ ಪರಿಕರಗಳ (ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆಗಾಗಿ ಸೌಲಭ್ಯ ಒದಗಿಸುವುದು.<br>5. ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನೆ/ಪರಿಶೀಲನೆಗೆ ಅವಕಾಶ ಒದಗಿಸುವುದು.<br><br>ಮುಂದುವರೆದು, ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವ ರೈತರಿಗೆ ಅವಶ್ಯಕ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡುವುದು. ನಿಯತವಾಗಿ ಗುಂಪುವಾರು ಭೇಟಿ ಕಾರ್ಯಕ್ರಮದ ಅನ್ವಯ ಕ್ಷೇತ್ರ ಭೇಟಿ, ವಿಸ್ತರಣಾ ಕಾರ್ಯ ಹಾಗೂ ಇಲಾಖೆಯ ವಿವಿಧ ಯೋಜನೆಗಳನ್ನು /ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಪೋಸ್ಟರ್, ಕರಪತ್ರಗಳ ಮುಖಾಂತರ, ಗ್ರಾಮಸಭೆಗಳು ಮತ್ತು ತರಬೇತಿಗಳಲ್ಲಿ ಜನಪ್ರತಿನಿಧಿಗಳಿಗೆ ಹಾಗೂ ರೈತರಿಗೆ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.<br><br>ಪ್ರಸ್ತುತ ರೈತ ಸಂಪರ್ಕ ಕೇಂದ್ರಗಳನ್ನು ರೈತರಿಗೆ ಮಾಹಿತಿ ತಂತ್ರಜ್ಞಾನ ವಿನಿಮಯಕ್ಕೆ ಹೆಚ್ಚಿನ ಒತ್ತು ನೀಡುವುದರ ಮೂಲಕ ನೋಡಲ್ ಕ್ರಿಯಾಶೀಲ ಕೇಂದ್ರಗಳಾಗಿ ಬಲಪಡಿಸಲು ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸಲು ಕ್ಷೇತ್ರ ಮಟ್ಟದಲ್ಲಿ ಕ್ರಮವಹಿಸಲು ಸರ್ಕಾರದ ಆದೇಶ ಸಂಖ್ಯೆAGRI.Act/112/2019, ದಿನಾಂಕ:31.10.2019ರಂದು ಆದೇಶ ಹೊರಡಿಸಿದೆ. ಸರ್ಕಾರದ ಆದೇಶದಂತೆ ಪ್ರತಿ ತಿಂಗಳ ಮೊದಲನೇ ಮತ್ತು ಮೂರನೇ ಸೋಮವಾರಗಳಂದು ಆಯಾ ಹೋಬಳಿಯ ರೈತರಿಗೆ |

| | | |
|---|---|---|
| | | ಅನುಕೂಲವಾಗುವಂತೆ ರೈತ ಸಂಪರ್ಕ ಕೇಂದ್ರಗಳಲ್ಲಿಯೇ ಸಭೆಗಳನ್ನು ಏರ್ಪಡಿಸಿ ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಅರಣ್ಯ, ಮೀನುಗಾರಿಕೆ, ಸಹಕಾರ ಇಲಾಖೆಗಳ ಅಧಿಕಾರಿಗಳ ಉಪಸ್ಥಿತಿಯಲ್ಲಿ ರೈತರಿಗೆ ಈ ಕೆಳಕಂಡಂತೆ ಮಾಹಿತಿಯನ್ನು ನೀಡಲಾಗುತ್ತಿದೆ.<br>➢ ಇಲಾಖೆಗಳ ವಿವಿಧ ಯೋಜನೆಗಳು, ಯೋಜನೆಯ ಸೌಲಭ್ಯ ಪಡೆಯಲು ಬೇಕಾಗುವ ರೈತರ ದಾಖಲಾತಿಗಳ ಬಗ್ಗೆ ಮಾಹಿತಿ ನೀಡುವುದು.<br>➢ ನೂತನ ತಾಂತ್ರಿಕತೆಗಳ ಬಗ್ಗೆ<br>➢ ಮಾರುಕಟ್ಟೆ ಸೌಲಭ್ಯ, ಪ್ರಸ್ತುತ ಕೃಷಿ /ತೋಟಗಾರಿಕೆ/ರೇಷ್ಮೆ ಉತ್ಪನ್ನಗಳ ಮಾರಾಟ ದರ ಕುರಿತು.<br>➢ ಮುಂದಿನ 15 ದಿನಗಳವರೆಗಿನ ಹವಾಮಾನ ಮುನ್ಸೂಚನೆ ಹಾಗೂ ಹವಾಮಾನ ವಿಕೋಪಗಳನ್ನು ಎದುರಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ.<br>➢ ಕೀಟ, ರೋಗ ಬರುವ ಸಾಧ್ಯತೆ ಮತ್ತು ನಿರ್ವಹಣೆ, ಬೆಳೆ ವಿಮೆ ನೋಂದಣಿ ಬಗ್ಗೆ ಸೂಕ್ತ ಮಾಹಿತಿಯನ್ನು ಮತ್ತು ರೈತರ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುತ್ತಿದೆ.<br>ಸದರಿ ಸಭೆಗಳಲ್ಲಿ ಸಂಬಂಧಿತ ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯಗಳ ಒಬ್ಬ ವಿಜ್ಞಾನಿ/ ಸಿಬ್ಬಂದಿಯು ಪಾಲ್ಗೊಂಡು ರೈತರ ಸಾಗುವಳಿ ವೆಚ್ಚವನ್ನು ಕಡಿಮೆ ಮಾಡಿ ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳು ಹಾಗೂ ರಸಗೊಬ್ಬರಗಳ ಪೂರೈಕೆ, ನೀರಾವರಿ ಹಾಗೂ ಕೃಷಿ ಯಾಂತ್ರೀಕರಣದ ಮೂಲಕ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸಿ ಕೊಯ್ಲೋತ್ತರ ನಿರ್ವಹಣೆ, ಮೌಲ್ಯವರ್ಧನೆ ಹಾಗೂ ಉತ್ತಮ ಮಾರಾಟ ಪದ್ಧತಿಗಳ ಮೂಲಕ ರೈತರಿಗೆ ಹೆಚ್ಚಿನ ಲಾಭ ಬರುವ ನಿಟ್ಟಿನಲ್ಲಿ ಮಾಹಿತಿ ನೀಡಲು ಕ್ರಮ ವಹಿಸಿದೆ. |
| ಇ) | ರೈತ ಕೇಂದ್ರಗಳಿಂದ ರೈತರಿಗೆ ಕೃಷಿ ಚಟುವಟಿಕೆ ಅವಧಿಯಲ್ಲಿ ಉತ್ತಮ ಬಿತ್ತನೆ ಬೀಜ ಮತ್ತು ರಾಸಾಯನಿಕ ಹಾಗೂ ರಸಗೊಬ್ಬರದ ಕೊರತೆ ರಾಜ್ಯದ ಕೆಲವು ಭಾಗಗಳಲ್ಲಿ ಇರುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? | ರಾಜ್ಯದ ರೈತಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆಬೀಜಗಳ ವಿತರಣೆಯಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ. 2022-23 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬಿತ್ತನೆ ಬೀಜಗಳ ಬೇಡಿಕೆ, ಲಭ್ಯತೆ ಮತ್ತು ವಿತರಣೆ ವಿವರ ಅನುಬಂಧ-2 ಮತ್ತು 3 ರಲ್ಲಿ ನೀಡಲಾಗಿದೆ.<br>ರಾಜ್ಯದಲ್ಲಿ ಕೇಂದ್ರ ಸರ್ಕಾರ ಅಧಿಸೂಚಿತ ಪೋಷಕಾಂಶ ಆಧಾರಿತ ಸಬ್ಸಿಡಿಗೆ ಒಳಪಡುವ ಯೂರಿಯಾ, ಡಿ.ಎ.ಪಿ, ಎಂ.ಒ.ಪಿ, ಎಸ್'.ಎಸ್'.ಪಿ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಮಾರಾಟ ಮಾಡುವುದಿಲ್ಲ. ರಸಗೊಬ್ಬರ ಮಾರಾಟ ಪರವಾನಗಿ ಹೊಂದಿರುವ ಅಧಿಕೃತ ಖಾಸಗಿ ಮಾರಾಟಗಾರರು ಮತ್ತು ಸಹಕಾರ ಸಂಘಗಳ ಮೂಲಕ ರಸಗೊಬ್ಬರಗಳನ್ನು ಮಾರಾಟ ಮಾಡಲಾಗುತ್ತಿದೆ. ಪ್ರಸಕ್ತ ರಾಜ್ಯದಲ್ಲಿ ಯಾವುದೇ ರಸಗೊಬ್ಬರಗಳ ಕೊರತೆ ಕಂಡುಬಂದಿರುವುದಿಲ್ಲ. |

| | | |
|---|---|---|
| | | ರಸಗೊಬ್ಬರಗಳ ಕೊರತೆಯನ್ನು ನೀಗಿಸಲು, ಪ್ರತಿ ಹಂಗಾಮಿನ ಪೂರ್ವದಲ್ಲಿಯೇ ರಸಗೊಬ್ಬರಗಳನ್ನು ಜಿಲ್ಲೆಗಳಲ್ಲಿ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ರಸಗೊಬ್ಬರದ ಬೇಡಿಕೆಯನ್ನು ಅಂದಾಜಿಸಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗುತ್ತದೆ.<br><br>ಇಲಾಖೆಯ ಅಧಿಕಾರಿಗಳ ನೇತೃತ್ವದಲ್ಲಿ ಕೇಂದ್ರ ಸರ್ಕಾರದಿಂದ ಮಾಹೆವಾರು, ಸಂಸ್ಥೆವಾರು ಹಂಚಿಕೆ ಮಾಡಲಾಗುವ ವಿವಿಧ ರಸಗೊಬ್ಬರಗಳನ್ನು ಜಿಲ್ಲಾವಾರು ಬೇಡಿಕೆಗನುಗುಣವಾಗಿ ನಿಗಧಿಪಡಿಸಿ, ರಸಗೊಬ್ಬರ ತಯಾರಕಾ ಸಂಸ್ಥೆಯವರಿಂದ ನೇರವಾಗಿ ಸಹಕಾರ ಸಂಘಗಳು ಹಾಗು ಅಧಿಕೃತ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರ ಮುಖಾಂತರ ಸಮರ್ಪಕ ರೀತಿಯಲ್ಲಿ ರೈತರಿಗೆ ಮಾರಾಟ ಮಾಡಲು ಸೂಕ್ತ ಕ್ರಮ ವಹಿಸಲಾಗಿದೆ.<br><br>2022-23ನೇ ಸಾಲಿನಲ್ಲಿ ಸಸ್ಯ ಸಂರಕ್ಷಣೆ ಯೋಜನೆಯಡಿ ಜೈವಿಕ ಪೀಡೆನಾಶಕ ಮತ್ತು ಜೈವಿಕ ನಿಯಂತ್ರಣಕಾರಕಗಳ ಘಟಕ, ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಕೀಟ/ರೋಗ ನಿರ್ವಹಣೆಗೆ ಸಹಾಯದನದಡಿ ಪೀಡೆನಾಶಕಗಳ ವಿತರಣೆ ಘಟಕದಡಿ ವಾರ್ಷಿಕ ಕಾರ್ಯಕ್ರಮಗಳನ್ನು ಜಿಲ್ಲೆಗಳಿಗೆ ನೀಡಿ, ಕಾರ್ಯಕ್ರಮದನ್ವಯ ಈಗಾಗಲೇ ಅನುದಾನವನ್ನು ಬಿಡುಗಡೆಗೊಳಿಸಿ ಜಿಲ್ಲೆಗಳಲ್ಲಿ ಪೀಡೆ ಸರ್ವೇಕ್ಷಣೆಯನ್ವಯ ರೈತರಿಗೆ ಅವಶ್ಯವಿರುವ ಪೀಡೆನಾಶಕಗಳನ್ನು ದಾಸ್ತಾನೀಕರಿಸಿ ಶೇ.50 ರ ಸಹಾಯಧನದಡಿ ವಿತರಿಸಲಾಗುತ್ತಿದೆ. |

**ಸಂಖ್ಯೆ:** AGRI-ASC/104/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

| ಅನುಬಂಧ-01 LAQ-570 | | |
|---|---|---|
| **ಜಿಲ್ಲಾವಾರು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳ ವಿವರ** | | |
| **ಕ್ರ.ಸಂ** | **ಜಿಲ್ಲೆ** | **ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ** |
| 1 | ಬಾಗಲಕೋಟೆ | 18 |
| 2 | ಬೆಂಗಳೂರು (ಗ್ರಾ) | 17 |
| 3 | ಬೆಂಗಳೂರು (ನ) | 11 |
| 4 | ಬೆಳಗಾವಿ | 35 |
| 5 | ಬಳ್ಳಾರಿ | 13 |
| 6 | ಬೀದರ್ | 30 |
| 7 | ಚಾಮರಾಜನಗರ | 16 |
| 8 | ಚಿಕ್ಕಬಳ್ಳಾಪುರ | 26 |
| 9 | ಚಿಕ್ಕಮಗಳೂರು | 34 |
| 10 | ಚಿತ್ರದುರ್ಗ | 22 |
| 11 | ದಕ್ಷಿಣ ಕನ್ನಡ | 16 |
| 12 | ದಾವಣಗೆರೆ | 20 |
| 13 | ಧಾರವಾಡ | 14 |
| 14 | ಗದಗ | 11 |
| 15 | ಕಲಬುರ್ಗಿ | 32 |
| 16 | ಹಾಸನ | 38 |
| 17 | ಹಾವೇರಿ | 19 |
| 18 | ಕೊಡಗು | 16 |
| 19 | ಕೋಲಾರ | 27 |
| 20 | ಕೊಪ್ಪಳ | 20 |
| 21 | ಮಂಡ್ಯ | 31 |
| 22 | ಮೈಸೂರು | 33 |
| 23 | ರಾಯಚೂರು | 37 |
| 24 | ರಾಮನಗರ | 18 |
| 25 | ಶಿವಮೊಗ್ಗ | 40 |
| 26 | ತುಮಕೂರು | 50 |
| 27 | ಉಡುಪಿ | 9 |
| 28 | ಉತ್ತರ ಕನ್ನಡ | 35 |
| 29 | ವಿಜಯಪುರ | 20 |
| 30 | ಯಾದಗಿರಿ | 16 |
| 31 | ವಿಜಯನಗರ | 18 |
| **ಒಟ್ಟು** | | **742** |

ಜಂಟಿ ಕೃಷಿ ನಿರ್ದೇಶಕರು
ಬೆಳೆ ಅಭಿವೃದ್ಧಿ

**ಅನುಬಂಧ-2 LCQ-570**

## 2022 ರ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜಗಳ ಬೇಡಿಕೆ, ಲಭ್ಯತೆ, ವಿತರಣೆ ಮತ್ತು ದಾಸ್ತಾನು (ಪ್ರಮಾಣ ಕ್ವಿಂಟಾಲ್ ಗಳಲ್ಲಿ)

| ಕ್ರ.ಸಂ. | ಬೆಳೆ | ಬೇಡಿಕೆ | ಲಭ್ಯತೆ | ವಿತರಣೆ |
|---|---|---|---|---|
| 1 | ಭತ್ತ | 85500 | 109024 | 63782.47 |
| 2 | ಹೈ.ಭತ್ತ | 1000 | 2860 | 598.13 |
| 3 | ರಾಗಿ | 25000 | 41595 | 18706.12 |
| 4 | ಸಜ್ಜೆ | 4300 | 8580 | 1569.28 |
| 5 | ಜೋಳ | 3700 | 3173 | 359.4 |
| 6 | ನವಣೆ | 1600 | 565 | 88.95 |
| 7 | ಮೆಕ್ಕೆಜೋಳ | 100100 | 194355 | 58223.16 |
| 8 | ತೊಗರಿ | 25000 | 31792 | 22124.88 |
| 9 | ಹೆಸರು | 8050 | 10429 | 5772.31 |
| 10 | ಉದ್ದು | 3300 | 2805 | 1948.64 |
| 11 | ಅಲಸಂದೆ | 3100 | 5916 | 2747.89 |
| 12 | ನೆಲಗಡಲೆ | 92000 | 111973 | 59851.25 |
| 13 | ಸೂರ್ಯಕಾಂತಿ | 6000 | 7354 | 3769.42 |
| 14 | ಸೋಯಅವರೆ | 180000 | 250900 | 166392.49 |
| | ಒಟ್ಟು | 538650 | 781321 | 405934.39 |

ಜಂಟಿ ಕೃಷಿ ನಿರ್ದೇಶಕರು
(ಬೀಜ ಮತ್ತು ರಾಜ್ಯ ಕ್ಷೇತ್ರ)

ಅನುಬಂಧ-3 LAQ-570

## 2022ರ ಹಿಂಗಾರು-ಬೇಸಿಗೆ ಹಂಗಾಮಿನಲ್ಲಿ ಬಿತ್ತನೆ ಬೀಜಗಳ ಬೇಡಿಕೆ ಲಭ್ಯತೆ, ಮತ್ತು ವಿತರಣೆ ವಿವರ(ಪ್ರಮಾಣ ಕ್ವಿಂಟಾಲ್ ಗಳಲ್ಲಿ)

| ಕ್ರ.ಸಂ. | ಬೆಳೆ | ಬೇಡಿಕೆ(SRR ಪ್ರಕಾರ) | ಒಟ್ಟು ಲಭ್ಯತೆ | ವಿತರಣೆ |
|---|---|---|---|---|
| 1 | ಭತ್ತ | 66831 | 14500 | 198 |
| 2 | ರಾಗಿ | 1476 | 3082 | 657 |
| 3 | ಜೋಳ | 20709 | 13322 | 5475 |
| 4 | ಗೋದಿ | 30360 | 14013 | 5517 |
| 5 | ತೃಣ ಧಾನ್ಯ | 495 | 100 | 0 |
| 6 | ಮುಸುಕಿನ ಜೋಳ | 23700 | 12750 | 1108 |
| 7 | ಕಡಲೆ | 174405 | 532225 | 264082 |
| 8 | ಹೆಸರು | 858 | 368 | 0 |
| 9 | ಉದ್ದು | 462 | 260 | 5 |
| 10 | ಅಲಸಂದೆ | 2228 | 3470 | 1674 |
| 11 | ನೆಲಗಡಲೆ | 107415 | 105508 | 66462 |
| 12 | ಸೂರ್ಯಕಾಂತಿ | 3400 | 1515 | 214 |
| 13 | ಕುಸುಬೆ | 1023 | 1115 | 527 |
| | ಒಟ್ಟು | **433362** | **702228** | 345919 |

ಷರಾ: ಬಿತ್ತನೆ ಬೀಜಗಳ ವಿತರಣೆ ಪ್ರಗತಿಯಲ್ಲಿರುತ್ತದೆ, ಯಾವುದೇ ಕೊರತೆ ಇರುವುದಿಲ್ಲ.

ಜಂಟಿ ಕೃಷಿ ನಿರ್ದೇಶಕರು
(ಬೀಜ ಮತ್ತು ರಾಜ್ಯ ಕ್ಷೇತ್ರ)